
ಮಂಗಳೂರು ವಿಶ್ವವಿದ್ಯಾನಿಲಯ
ಎನ್.ಜಿ. ಪಾವಂಜೆ ಚಿತ್ರಕಲಾ ಪೀಠ, ಬಾಲವನ ಸಮಿತಿ, ಪುತ್ತೂರು
ಕ್ಷೇತ್ರ ಶಿಕ್ಷಣಾಧಿಕಾರಿ ಕಾರ್ಯಾಲಯ, ಪುತ್ತೂರು, ದ.ಕ. ಜಿಲ್ಲಾ ಚಿತ್ರಕಲಾ ಶಿಕ್ಷಕರ ಸಂಘ, ಮಂಗಳೂರು
ಇವರ ಸಹಭಾಗಿತ್ವದಲ್ಲಿ
ಪ್ರಾಥಮಿಕ ಮತ್ತು ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ
ತಾಲೂಕು ಮಟ್ಟದ ಚಿತ್ರಕಲಾ ಸ್ಪರ್ಧೆ
ದಿನಾಂಕ: 9-11-2015 ಸ್ಥಳ: ಡಾ. ಶಿವರಾಮ ಕಾರಂತರ ಬಾಲವನ, ಪುತ್ತೂರು









ಮಂಗಳೂರು ವಿಶ್ವವಿದ್ಯಾನಿಲಯ    ಎನ್.ಜಿ.ಪಾವಂಜೆ ಚಿತ್ರಕಲಾ ಪೀಠ

**ಎನ್.ಜಿ. ಪಾವಂಜೆ ಸ್ಮರಣಾರ್ಥ**
**ಪ್ರಾಥಮಿಕ ಮತ್ತು ಪ್ರೌಢಶಾಲಾ**
**ವಿದ್ಯಾರ್ಥಿಗಳ ತಾಲೂಕು ಮಟ್ಟದ**
**ಚಿತ್ರಕಲಾ ಸ್ಪರ್ಧೆ**
**ಹಾಗೂ**
**ಚಿತ್ರಕಲಾ ಪ್ರದರ್ಶನ**

ಸೋಮವಾರ 9, ನವೆಂಬರ್ 2015
ಡಾ. ಶಿವರಾಮ ಕಾರಂತ ಆರ್ಟ್ ಗ್ಯಾಲರಿ
ಬಾಲವನ, ಪುತ್ತೂರು

ಉದ್ಘಾಟನಾ ಸಮಾರಂಭ    ಬೆಳಗ್ಗೆ 9-30ಕ್ಕೆ

**ಪ್ರೊ. ಕೆ. ಭೈರಪ್ಪ**, ಕುಲಪತಿಗಳು, ಮಂಗಳೂರು ವಿಶ್ವವಿದ್ಯಾನಿಲಯ
ಎನ್.ಜಿ. ಪಾವಂಜೆ ಸಂಸ್ಮರಣಾ ಜ್ಯೋತಿಯನ್ನು ಪ್ರಜ್ವಲಿಸಿ ಉದ್ಘಾಟಿಸಲಿರುವವರು

**ಶ್ರೀ ಜಿ.ಕೆ. ಶಿವಣ್ಣ**, ಕಲಾವಿದರು, ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಚೇರಿ, ಬೆಂಗಳೂರು
ಲಲಿತಕಲಾ ಪ್ರದರ್ಶನ ಉದ್ಘಾಟಿಸಲಿರುವವರು

ಗೌರವ ಉಪಸ್ಥಿತಿ
**ಶ್ರೀ ಪಿ.ಎಸ್. ಪುಂಚಿತ್ತಾಯ** ಕಲಾಗ್ರಾಮ, ಕಾರಡ್ಕ
ಕರ್ನಾಟಕ ಮತ್ತು ಕೇರಳ ಲಲಿತಕಲಾ ಅಕಾಡೆಮಿ ಪುರಸ್ಕೃತ ಹಿರಿಯ ಕಲಾವಿದರು

ಅಧ್ಯಕ್ಷತೆ
**ಸತೀಶ್ ಕುಮಾರ್ ಡಿ.ಎಮ್.** KAS
ಸಹಾಯಕ ಆಯುಕ್ತರು, ಪುತ್ತೂರು

ಸಮಾರೋಪ ಸಮಾರಂಭ    ಮಧ್ಯಾಹ್ನ 2-30ಕ್ಕೆ

**ಶ್ರೀ ಪಿ.ಎಸ್. ಪುಂಚಿತ್ತಾಯ**
ಮುಖ್ಯ ಅತಿಥಿಗಳಾಗಿ ಚಿತ್ರಕಲೆ ಪ್ರಾತ್ಯಕ್ಷಿಕೆ ನೀಡಲಿರುವರು.

ಗೌರವ ಅತಿಥಿಗಳು
**ಶ್ರೀ ಮಹಾಬಲ ಕುಳ**, ಅಧ್ಯಕ್ಷರು, ದ.ಕ.ಜಿಲ್ಲಾ ಚಿತ್ರಕಲಾ ಶಿಕ್ಷಕರ ಸಂಘ
**ಶ್ರೀ ಶಶಿಧರ ಜಿ.ಎಸ್.**, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಪುತ್ತೂರು

ಅಧ್ಯಕ್ಷತೆ
**ಪ್ರೊ. ಟಿ.ಡಿ. ಕೆಂಪರಾಜು**, ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ

ತಮಗೆ
ಆತ್ಮೀಯ
ಸ್ವಾಗತ

**ಪ್ರೊ. ರವಿಶಂಕರ್ ರಾವ್**
ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ
ಸಂಯೋಜಕರು, ಪಾವಂಜೆ ಪೀಠ

**ಪ್ರೊ. ಟಿ.ಡಿ. ಕೆಂಪರಾಜು**
ಕುಲಸಚಿವರು
ಮಂಗಳೂರು ವಿಶ್ವವಿದ್ಯಾನಿಲಯ

ಸಹಕಾರ
- ಬಾಲವನ ಸಮಿತಿ
- ಪುತ್ತೂರು ಕ್ಷೇತ್ರ ಶಿಕ್ಷಣಾಧಿಕಾರಿ ಕಾರ್ಯಾಲಯ, ಪುತ್ತೂರು
- ದ.ಕ.ಜಿಲ್ಲಾ ಚಿತ್ರಕಲಾ ಶಿಕ್ಷಕರ ಸಂಘ, ಮಂಗಳೂರು

---

6/11/2015, ಉದಯವಾಣಿ

# ಪಾವಂಜೆ ಸ್ಮರಣಾರ್ಥ ನ. 9ಕ್ಕೆ ಚಿತ್ರಕಲಾ ಸ್ಪರ್ಧೆ, ಪ್ರದರ್ಶನ

ಪುತ್ತೂರು, ನ. 5: ಮಂಗಳೂರು ವಿಶ್ವವಿದ್ಯಾನಿಲಯದ ಎನ್.ಜಿ. ಪಾವಂಜೆ ಚಿತ್ರಕಲಾ ಪೀಠದ ವತಿಯಿಂದ ನ. 9 ರಂದು ಪರ್ಲಡ್ಕ ಡಾ. ಶಿವರಾಮ ಕಾರಂತ ಬಾಲವನದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ತಾಲೂಕು ಮಟ್ಟದ ಚಿತ್ರಕಲಾ ಸ್ಪರ್ಧೆ ಹಾಗೂ ಚಿತ್ರಕಲಾ ಪ್ರದರ್ಶನವನ್ನು ಆಯೋಜಿಸಲಾಗಿದೆ ಎಂದು ಸಹಾಯಕ ಕಮಿಷನರ್, ಬಾಲವನ ಅಭಿವೃದ್ಧಿ ಸಮಿತಿ ಅಧ್ಯಕ್ಷ ಸತೀಶ್ ಕುಮಾರ್ ಡಿ.ಎಂ. ಹೇಳಿದರು.

ಪತ್ರಕರ್ತರ ಜತೆ ಮಾತನಾಡಿದ ಅವರು, ಖ್ಯಾತ ಕಲಾಕಾರ ಎನ್.ಜಿ. ಪಾವಂಜೆ ಅವರ ಸ್ಮರಣಾರ್ಥ ಮಂಗಳೂರು ವಿವಿಯ ಪಾವಂಜೆ ಚಿತ್ರಕಲಾ ಪೀಠವು ಪ್ರಥಮ ಬಾರಿಗೆ ತಾಲೂಕು ಮಟ್ಟದಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದೆ. ದ.ಕ. ಜಿಲ್ಲಾ ಚಿತ್ರಕಲಾ ಶಿಕ್ಷಕರ ಸಂಘ, ಪುತ್ತೂರು ಬಾಲವನ ಸಮಿತಿ, ಪುತ್ತೂರು ಕ್ಷೇತ್ರ ಶಿಕ್ಷಣಾಧಿಕಾರಿಯವರ ಕಾರ್ಯಾಲಯದ ಸಹಯೋಗದಲ್ಲಿ ಈ ಕಾರ್ಯಕ್ರಮ ನಡೆಯಲಿದೆ ಎಂದರು.

**ಉದ್ಘಾಟನಾ ಸಮಾರಂಭ**

ನ. 9 ರಂದು ಪೂರ್ವಾಹ್ನ 9. 30 ಕ್ಕೆ ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ| ಕೆ. ಭೈರಪ್ಪ ಅವರು ಎನ್.ಜಿ.ಪಾವಂಜೆ ಸಂಸ್ಮರಣಾ ಜ್ಯೋತಿಯನ್ನು ಪ್ರಜ್ವಲಿಸುವ ಮೂಲಕ ಉದ್ಘಾಟನೆ ನೆರವೇರಿಸಲಿದ್ದಾರೆ. ಬೆಂಗಳೂರು ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಚೇರಿಯ ... ಸಹಾಯಕ ಕಮಿಷನರ್ ಸತೀಶ್ ಕುಮಾರ್ ಡಿ.ಎಂ. ಅಧ್ಯಕ್ಷತೆ ವಹಿಸಲಿದ್ದಾರೆ.

**ಸ್ಪರ್ಧೆ ಹೀಗೆ ನಡೆಯಲಿದೆ**

ಜಲವರ್ಣ ಪೈಂಟಿಂಗ್ ಸ್ಪರ್ಧೆಯು ಬೇರೆ ಬೇರೆ ವಿಭಾಗಗಳಲ್ಲಿ ನಡೆಯಲಿದ್ದು 1 ರಿಂದ 4 ನೇ ತರಗತಿಗೆ ಸಾಮಾನ್ಯ ವಿಷಯ, 5 ರಿಂದ 7 ನೇ ತರಗತಿಗೆ ಗ್ರಾಮೀಣ ಬದುಕು ವಿಷಯದಲ್ಲಿ ಹಾಗೂ 8 ರಿಂದ 10 ನೇ ತರಗತಿ ವಿಭಾಗದ ವಿದ್ಯಾರ್ಥಿಗಳಿಗೆ ನಮ್ಮೂರ ಜಾತ್ರೆ ವಿಷಯದಲ್ಲಿ ಸ್ಪರ್ಧೆಯನ್ನು ಆಯೋಜಿಸಲಾಗಿದೆ.

ಈ ಸಂದರ್ಭದಲ್ಲಿ ತಾಲೂಕಿನ ಚಿತ್ರ ಕಲಾ ಶಿಕ್ಷಕರಿಂದ ಹಾಗೂ ಕಲಾವಿದರಿಂದ ಚಿತ್ರಕಲಾ ಪ್ರದರ್ಶನವೂ ನಡೆಯಲಿದೆ. ಭಾಗವಹಿಸುವ ಅಂದಾಜು 400 ಮಂದಿಗೆ ಊಟ, ತಿಂಡಿಯ ವ್ಯವಸ್ಥೆಯನ್ನು ಬಾಲವನದ ವತಿಯಿಂದ ಮಾಡಲಾಗುತ್ತದೆ ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಲಾಗಿದೆ.

ಸಮಾರೋಪ ಕಾರ್ಯಕ್ರಮವು ಅಪರಾಹ್ನ ದ.ಕ. ಜಿಲ್ಲಾ ಚಿತ್ರಕಲಾ ಶಿಕ್ಷಕರ ಸಂಘದ ಅಧ್ಯಕ್ಷ ಮಹಾಬಲ ಕುಳ, ಪುತ್ತೂರು ಕ್ಷೇತ್ರ ಶಿಕ್ಷಣಾಧಿಕಾರಿ ಶಶಿಧರ ಜಿ.ಎಸ್. ಗೌರವ ಉಪಸ್ಥಿತಿಯಲ್ಲಿ ನಡೆಯಲಿದ್ದು, ಮಂಗಳೂರು ವಿವಿ ಕುಲಸಚಿವ ಪ್ರೊ| ಟಿ.ಡಿ. ಕೆಂಪರಾಜು ಅಧ್ಯಕ್ಷತೆ ...



ಪೀಠದ ವತಿಯಿಂದ ಗ್ರಾಮೀಣ ಭಾಗದ ಮಕ್ಕಳಿಗೆ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಪುತ್ತೂರಿನಲ್ಲಿ ಪ್ರಥಮ ಬಾರಿಗೆ ಕಾರ್ಯಕ್ರಮ ಆಯೋಜಿಸಲಾಗಿದೆ. ಇದರಿಂದ ವಿಶ್ವವಿದ್ಯಾನಿಲಯವು ಪ್ರಾಥಮಿಕ ಹಾಗೂ ಪ್ರೌಢಶಾಲಾ ಮಟ್ಟದಲ್ಲಿ ಕಾರ್ಯಕ್ರಮ ಸಂಯೋಜಿಸಿದಂತಾಗುತ್ತದೆ. ಮುಂದಿನ ದಿನಗಳಲ್ಲಿ ಇತರ ತಾಲೂಕುಗಳಿಗೂ ಕಾರ್ಯಕ್ರಮವನ್ನು ವಿಸ್ತರಿಸುವ ಯೋಚನೆ ಮಾಡಲಾಗುವುದು.

**-ಪ್ರೊ| ರವಿಶಂಕರ್ ರಾವ್**, ವಿವಿ ಇಂಗ್ಲ ವಿಭಾಗ ಪ್ರಾಧ್ಯಾಪಕ ಹಾಗೂ ಪಾವಂಜೆ ಪೀಠದ ಸಂಯೋಜಕ

4 ಬಾರಿ ಸಭೆ ನಡೆಸಿ ಚರ್ಚಿಸಿ ರೂಪುರೇಷೆಗಳನ್ನು ಸಿದ್ಧಪಡಿಸಲಾಗಿದೆ. ಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ಮಕ್ಕಳನ್ನು ಕರೆತರುವ ಜವಾಬ್ದಾರಿಯನ್ನು ಪೋಷಕರಿಗೆ ವಹಿಸಲಾಗಿದೆ. ಸರಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳ ಮಕ್ಕಳಿಗೆ ಭಾಗವಹಿಸಲು ಅವಕಾಶವಿದ್ದು, ಒಂದು ಶಾಲೆಯಿಂದ 1 ವಿಭಾಗದಲ್ಲಿ 2 ಮಕ್ಕಳಿಗೆ ಭಾಗವಹಿಸಲು ಅವಕಾಶ ನೀಡಲಾಗುತ್ತದೆ. ನೋಡೆಲ್ ಅಧಿಕಾರಿಗಳಾಗಿರುವ ಪುತ್ತೂರು ಶಿಕ್ಷಣ ಸಂಪನ್ಮೂಲ ಕೇಂದ್ರದಲ್ಲಿರುವ ...

# ಬಾಲವನದಲ್ಲಿ ಎನ್.ಜೆ.ಪಾವಂಜೆ ಸ್ಮರಣಾರ್ಥ ತಾಲೂಕು ಮಟ್ಟದ ಚಿತ್ರಕಲಾ ಸ್ಪರ್ಧೆ-ಚಿತ್ರಕಲಾ ಪ್ರದರ್ಶನ

## ವಿಶ್ವವಿದ್ಯಾನಿಲಯ ಕೇವಲ ಸ್ನಾತಕೋತ್ತರ ಕೇಂದ್ರಕ್ಕೆ ಸೀಮಿತವಾಗದೆ ಸಮಾಜ ಕಾರ್ಯದ ಅಂಗವಾಗಿದೆ-ಪ್ರೊ. ಕೆ. ಭೈರಪ್ಪ

### ಪ್ರತಿಭೆಯ ಅನಾವರಣಕ್ಕೆ ಉತ್ತಮ ವೇದಿಕೆಯಾಗಿದೆ-ಎ.ಸಿ.



ಚಿತ್ರ: ಸುನೀಲ್.ಎನ್ ಕಾವು

ಪುತ್ತೂರು: ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಹಲವಾರು ಪೀಠಗಳಿವೆ. ಆದರೆ ಹಣದ ಕೊರತೆಯಿಂದಾಗಿ ಕೆಲವೊಂದು ಪೀಠಗಳು ಕಾರ್ಯಕ್ರಮಗಳನ್ನು ನಡೆಸದೇ ಕುಂಠಿತವಾಗಿದೆ. ಆದರೂ ಮಂಗಳೂರು ವಿಶ್ವವಿದ್ಯಾನಿಲಯವು ಕೇವಲ ಸ್ನಾತಕೋತ್ತರ ಕೇಂದ್ರಕ್ಕೆ ಸೀಮಿತವಾಗದೆ ಉನ್ನತ ಶಿಕ್ಷಣದ ಮೂಲಕ ಸಮಾಜ ಕಾರ್ಯದ ಅಂಗವಾಗಿ ಬೆಳೆಯುತ್ತಿದೆ ಎಂದು ಮಂಗಳೂರು ವಿ.ವಿ ಕುಲಪತಿ ಪ್ರೊ. ಕೆ.ಭೈರಪ್ಪ ಹೇಳಿದರು. ಅವರು ನ.9ರಂದು ಪರ್ಲಡ್ಕದಲ್ಲಿರುವ ಬಾಲವನದ ಡಾ.ಶಿವರಾಮ ಕಾರಂತ ಆರ್ಟ್ ಗ್ಯಾಲರಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಎನ್.ಜೆ ಪಾವಂಜೆ ಚಿತ್ರಕಲಾ ಪೀಠದ ವತಿಯಿಂದ ಎನ್. ಜೆ ಪಾವಂಜೆ ಸ್ಮರಣಾರ್ಥ ದ.ಕ ಜಿಲ್ಲಾ ಚಿತ್ರಕಲಾ ಸಂಘ ಮಂಗಳೂರು, ಕ್ಷೇತ್ರ ಶಿಕ್ಷಣಾಧಿಕಾರಿಯವರ ಕಾರ್ಯಾಲಯ ಪುತ್ತೂರು , ಬಾಲವನ ಸಮಿತಿ ಪುತ್ತೂರು ಇವರ ಸಹಯೋಗದೊಂದಿಗೆ ನಡೆದ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳ ತಾಲೂಕು ಮಟ್ಟದ ಚಿತ್ರಕಲಾ ಸ್ಪರ್ಧೆ ಹಾಗೂ ಚಿತ್ರಕಲಾ ಪ್ರದರ್ಶನದ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದರು.

ಪ್ರಸ್ತುತ ಮಂಗಳೂರು ವಿಶ್ವವಿದ್ಯಾನಿಲಯವನ್ನು ಗ್ರಾಮ ಮತ್ತು ಪಟ್ಟಣಗಳಿಗೆ ಕೊಂಡೊಯ್ಯುವ ಕಾರ್ಯವಾಗುತ್ತಿದೆ , ಈ ವರ್ಷದಿಂದ ವಿಶ್ವವಿದ್ಯಾನಿಲಯವು ಪ್ರತೀ ವರ್ಷದಲ್ಲಿ 4 ಗ್ರಾಮಗಳನ್ನು ದತ್ತು ತೆಗೆದುಕೊಂಡು ನಮ್ಮ ವಿದ್ಯಾರ್ಥಿಗಳು ಅಲ್ಲಿನ ಪರಿಸರ, ವ್ಯವಹಾರ, ರಾಜಕೀಯ, ಸೇರಿದಂತೆ ಎಲ್ಲಾ ವಿಚಾರಗಳ ಅಧ್ಯಯನ ಮಾಡಿ ವಿಶ್ವವಿದ್ಯಾನಿಲಯಕ್ಕೆ ಮತ್ತು ಸರಕಾರಕ್ಕೆ ಅಂತಿಮ ವರದಿಯನ್ನು ಕೊಡಲಾಗುವುದು ಈ ಮೂಲಕ ವಿಶ್ವವಿದ್ಯಾನಿಲಯವು ಸಾರ್ವಜನಿಕರನ್ನು ತಲುಪುವ ಪ್ರಯತ್ನ ಮಾಡಲಾಗುವುದು ಎಂದು ಅವರು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಪುತ್ತೂರು ಉಪವಿಭಾಗದ ಸಹಾಯಕ ಆಯುಕ್ತ ಸತೀಶ್ ಕುಮಾರ್ ಡಿ.ಎಮ್. ಮಾತನಾಡಿ, ಮಕ್ಕಳ ಪ್ರತಿಭೆಯ ಅನಾವರಣಕ್ಕೆ ಇವತ್ತಿನ ಚಿತ್ರಕಲಾ ಸ್ಪರ್ಧೆಯು ಉತ್ತಮ ವೇದಿಕೆಯಾಗಿದೆ. ಈ ಕಾರ್ಯಕ್ರಮ ಬೇರೆ ಎಲ್ಲಿಯಾದರೂ ಆಯೋಜನೆ ಆಗುತ್ತಿದ್ದರೆ ಪರಿಪೂರ್ಣತೆ ಹೊಂದಿರುತ್ತಿರಲಿಲ್ಲ, ಕಾರ್ಯಕ್ರಮವು ಶಿವರಾಮ ಕಾರಂತರ ಬಾಲವನದಲ್ಲಿ ಆಯೋಜನೆಗೊಳ್ಳುವ ಮೂಲಕ ಕಾರ್ಯಕ್ರಮ ನೂರಕ್ಕೆ ನೂರರಷ್ಟು ಪರಿಪೂರ್ಣತೆ ಆಗಿದೆ, ಮಕ್ಕಳ ಸಣ್ಣ ಭಾವನೆಗಳು ಹೊರಬಂದು ದೊಡ್ಡ ಭಾವನೆಯಾಗಿ ಅವರ ಉಜ್ವಲ ಭವಿಷ್ಯಕ್ಕೆ ದಾರಿದೀಪವಾಗಲಿದೆ ಎಂದರು.

ಕರ್ನಾಟಕ ಮತ್ತು ಕೇರಳ ಲಲಿತಾಕಲಾ ಅಕಾಡೆಮಿ ಪುರಸ್ಕೃತ ಹಿರಿಯ ಕಲಾವಿದ ಪಿ.ಎಸ್. ಪುಂಚಿತ್ತಾಯ, ದ.ಕ ಜಿಲ್ಲಾ ಚಿತ್ರಕಲಾ ಶಿಕ್ಷಕರ ಸಂಘದ ಅಧ್ಯಕ್ಷ ಮಹಾಬಲ ಕುಳ, ಪುತ್ತೂರು ಕ್ಷೇತ್ರ ಶಿಕ್ಷಣಾಧಿಕಾರಿ ಶಶಿಧರ್ ಜಿ.ಎಸ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಪಾವಂಜೆ ಪೀಠದ ಸಂಯೋಜಕ ರವಿಶಂಕರ ರಾವ್ ಪ್ರಾಸ್ತಾವಿಕ ನುಡಿಯೊಂದಿಗೆ ಸ್ವಾಗತಿಸಿದರು. ವಿ.ವಿ. ಸಿಂಡಿಕೇಟ್ ಸದಸ್ಯ ಪ್ರಸನ್ನ ಕುಮಾರ್ ವಂದಿಸಿದರು. ಬಾಲವನ ಸಮಿತಿ ಸದಸ್ಯ ಬಿ.ಜೆ ಸುವರ್ಣ ಕಾರ್ಯಕ್ರಮ ನಿರ್ವಹಿಸಿದರು.

**ಚಿತ್ರಕಲಾ ಪ್ರದರ್ಶನ** : ತಾಲೂಕಿನ ಚಿತ್ರಕಲಾ ಶಿಕ್ಷಕರಿಂದ ಮತ್ತು ಕಲಾವಿದರಿಂದ ಚಿತ್ರಕಲಾ ಪ್ರದರ್ಶನ ಏರ್ಪಡಿಸಲಾಗಿತ್ತು.

ಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಕಂದಾಯ ಇಲಾಖೆ ವತಿಯಿಂದ ಊಟ , ಉಪಾಹಾರದ ವ್ಯವಸ್ಥೆ ಮಾಡಲಾಗಿತ್ತು.



ಕುಲಪತಿಯವರು ವೇದಿಕೆಯಲ್ಲಿ ಕುಳಿತಿರುವಾಗಲೇ ಅವರ ಮುಖದ ಚಿತ್ರ ಬಿಡಿಸಿಕೊಟ್ಟ ಕಿರಣ್ ಕುಮಾರ್ ಹಿರೇಬಂಡಾಡಿ ಸರಕಾರಿ ಶಾಲೆಯ ಚಿತ್ರಕಲಾ ಶಿಕ್ಷಕ ಕಿರಣ್‌ಕುಮಾರ್ ಅವರು ಮಂಗಳೂರು ವಿವಿ ಕುಲ ಪತಿಯವರು ವೇದಿಕೆಯಲ್ಲಿ ಭಾಷಣ ಮಾಡಿ ಮುಗಿಸುವಷ್ಟರಲ್ಲಿ ಅವರ ಮುಖ ಚಿತ್ರವನ್ನು ಬಿಡಿಸಿ ವೇದಿಕೆಯಲ್ಲೇ ಅವರಿಗೆ ಹಸ್ತಾಂತರಿಸಿದ್ದು ವಿಶೇಷವಾಗಿತ್ತು, ಮತ್ತು ಅವರ ಕೈಚಳಕ್ಕೆ ಎಲ್ಲರೂ ಮೆಚ್ಚುಗೆ ವ್ಯಕ್ತಪಡಿಸಿದರು.


**ಶಾರದಾ ಪೂಜೆ ಹಾಗೂ ಸಂಗೀತ**

14-11-2015 ಶನಿವಾರ
ಅಪರಾಹ್ನ 2.00ರಿಂದ 5.00

ಅನುರಾಗ ವಠಾರ ಪುತ್ತೂರು

ಸಂಗೀತ ಗಾನಕೇಸರಿ ವಿದ್ವಾನ್
ಕುದ್ಮಾರು ವೆಂಕಟ್ರಮನ್ ಮತ್ತು ಶಿಷ್ಯರು

ಸರ್ವರಿಗೂ ಸ್ವಾಗತ


---

# ಎನ್. ಜಿ. ಪಾವಂಜೆ ಸ್ಮರಣಾರ್ಥ ಚಿತ್ರಕಲಾ ಸ್ಪರ್ಧೆ

## 'ವಿವಿಯನ್ನು ಗ್ರಾಮ ಮಟ್ಟಕ್ಕೆ ಕೊಂಡೊಯ್ಯಲು ಯತ್ನ'



ತಾಲೂಕು ಮಟ್ಟದ ಚಿತ್ರಕಲಾ ಸ್ಪರ್ಧೆ ಹಾಗೂ ಪ್ರದರ್ಶನವನ್ನು ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ। ಕೆ. ಭೈರಪ್ಪ ದೀಪ ಬೆಳಗಿಸಿ ಉದ್ಘಾಟಿಸಿದರು.

ಪುತ್ತೂರು, ನ. 9: ವಿಶ್ವ ವಿದ್ಯಾನಿಲಯಗಳು ಕೇವಲ ಶಿಕ್ಷಣಕ್ಕೆ ಸೀಮಿತವಾಗದೆ ಸಮಾಜ ಸೇವೆಯ ಅಂಗವಾಗಬೇಕು. ಈ ನಿಟ್ಟಿನಲ್ಲಿ ವಿವಿಯನ್ನು ಗ್ರಾಮ ಮಟ್ಟಕ್ಕೆ ಕೊಂಡೊಯ್ಯಲು ಪ್ರಯತ್ನಿಸಲಾಗುತ್ತಿದೆ ಎಂದು ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ। ಕೆ. ಭೈರಪ್ಪ ಹೇಳಿದರು.

ಅವರು ಕಲಾವಿದ ಎನ್. ಜಿ. ಪಾವಂಜೆ ಸ್ಮರಣಾರ್ಥ ಮಂಗಳೂರು ವಿವಿಯ ಎನ್.ಜಿ. ಪಾವಂಜೆ ಚಿತ್ರಕಲಾ ಪೀಠ, ಪುತ್ತೂರು ಬಾಲವನ ಸಮಿತಿ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಯವರ ಸಹಯೋಗದಲ್ಲಿ ಡಾ। ಶಿವರಾಮ ಕಾರಂತ ಬಾಲವನದ ಆರ್ಟ್ ಗ್ಯಾಲರಿಯಲ್ಲಿ ಹಮ್ಮಿಕೊಳ್ಳಲಾದ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳ ತಾಲೂಕು ಮಟ್ಟದ ಚಿತ್ರಕಲಾ ಸ್ಪರ್ಧೆ ಹಾಗೂ ಚಿತ್ರಕಲಾ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದರು.

ಕಲಾಕಾರ ಪಾವಂಜೆಯವರಂಥ ಸಾಧಕರ ಸಾಧನೆ ಇಂದಿನ ಹಾಗೂ ಮುಂದಿನ ಪೀಳಿಗೆಗೂ ತಿಳಿಯುವಂತಾಗಬೇಕು. ಈ ನಿಟ್ಟಿನಲ್ಲಿ ಚಿತ್ರಕಲಾ ಪೀಠದ ಮೂಲಕ ಪುತ್ತೂರು ತಾಲೂಕು ವ್ಯಾಪ್ತಿಯಲ್ಲಿ ಇಂತಹ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

**ಗ್ರಾಮಗಳ ಅಧ್ಯಯನ**

ಪ್ರತಿ ವರ್ಷ 4 ಗ್ರಾಮಗಳನ್ನು ಆಯ್ಕೆ ಮಾಡಿ ಎಲ್ಲ ರೀತಿಯ ಅಧ್ಯಯನಗಳನ್ನು ನಡೆಸಿ ವರದಿ ತಯಾರಿಸುವುದರಜತೆಗೆಸಂಬಂಧಪಟ್ಟಅಧಿಕಾರಿಗಳು, ಪ್ರತಿನಿಧಿಗಳಿಗೆ ಮಂಡಿಸಲು ನಿರ್ಧರಿಸಲಾಗಿದೆ ಎಂದು ಪ್ರೊ। ಕೆ. ಭೈರಪ್ಪ ತಿಳಿಸಿದರು.

ಮಂಗಳೂರು ವಿವಿಯಲ್ಲಿ ಮುಂದಿನ ಮೇ ಅಥವಾ ಜೂನ್ ತಿಂಗಳಿನಲ್ಲಿನಡೆಯುವ ಓಪನ್ ಹೌಸ್ ಕಾರ್ಯಕ್ರಮದಲ್ಲಿ ಈ ಭಾಗದ ಮಕ್ಕಳು ಭಾಗವಹಿಸಬೇಕು ಎಂದು ವಿನಂತಿಸಿದರು.

**ಪರಿಪೂರ್ಣ ಕಾರ್ಯಕ್ರಮ**

ಅಧ್ಯಕ್ಷತೆ ವಹಿಸಿದ್ದ ಪುತ್ತೂರು ಸಹಾಯಕ ಕಮಿಷನರ್ ಸತೀಶ್ ಕುಮಾರ್ ಡಿ.ಎಂ. ಮಾತನಾಡಿ, ಕಲೆಯ ಆರಾಧಕ ಪಾವಂಜೆಯವರ ಸ್ಮರಣಾರ್ಥ ನಡೆಯುವ ಕಾರ್ಯಕ್ರಮವನ್ನು ಡಾ। ಶಿವರಾಮ ಕಾರಂತರ ಬಾಲವನದಲ್ಲಿ ಹಮ್ಮಿಕೊಂಡಿರುವುದರಿಂದ ಪರಿಪೂರ್ಣತೆ ಪಡೆದುಕೊಂಡಿದೆ. ಕಾರಂತರು ಕಲೆಯ ಮೂಲಕ ಭಾವನೆಯನ್ನು ಹೊರಹಾಕಿದ ನೆಲದಲ್ಲಿಮಕ್ಕಳ ಪ್ರತಿಭೆ ಹೊರಹಾಕಲು ಅವಕಾಶ ಲಭಿಸಿದೆ ಎಂದು ಶುಭಹಾರೈಸಿದರು.

ಹಿರಿಯ ಕಲಾವಿದ ಪಿ.ಎಸ್. ಪುಣ್ಚಿತ್ತಾಯ, ಪುತ್ತೂರು ಕ್ಷೇತ್ರ ಶಿಕ್ಷಣಾಧಿಕಾರಿ ಶಶಿಧರ್ ಜಿ.ಎಸ್., ದ.ಕ. ಚಿತ್ರಕಲಾ ಶಿಕ್ಷಕರ ಸಂಘದ ಅಧ್ಯಕ್ಷ ಮಹಾಬಲ ಕುಳ ವಿದ್ಯಾರ್ಥಿಗಳಿಗೆ ಶುಭಹಾರೈಸಿದರು.

ಮಂಗಳೂರು ವಿವಿ ಪ್ರಾಧ್ಯಾಪಕ ಹಾಗೂ ಪಾವಂಜೆ ಪೀಠದ ಸಂಯೋಜಕ ಪ್ರೊ। ರವಿಶಂಕರ ರಾವ್ ಸ್ವಾಗತಿಸಿ, ಮಂಗಳೂರು ವಿವಿ ಸಿಂಡಿಕೇಟ್ ಸದಸ್ಯ ಪ್ರಸನ್ನ ಕುಮಾರ್ ರೈ ವಂದಿಸಿದರು. ಬಾಲವನ ಸಮಿತಿ ಸದಸ್ಯ ಪ್ರೊ। ಬಿ.ಜೆ. ಸುವರ್ಣ ನಿರ್ವಹಿಸಿದರು.

ಸಭೆಯ ಬಳಿಕ ವಿದ್ಯಾರ್ಥಿಗಳ ಚಿತ್ರಕಲಾ ಸ್ಪರ್ಧೆ ನಡೆಯಿತು.

# ವಿವಿಯಿಂದ ಗ್ರಾಮ ದತ್ತು

## ಚಿತ್ರಕಲಾ ಸ್ಪರ್ಧೆ ಉದ್ಘಾಟಿಸಿ ಕುಲಪತಿ ಪ್ರೊ.ಭೈರಪ್ಪ ಹೇಳಿಕೆ



ಮಂಗಳೂರು ವಿವಿಯ ಎನ್.ಜಿ.ಪಾವಂಜೆ ಚಿತ್ರಕಲಾ ಪೀಠ ಆಶ್ರಯದಲ್ಲಿ ಹಮ್ಮಿಕೊಂಡ ಪುತ್ತೂರು ತಾಲೂಕು ಮಟ್ಟದ ಪ್ರಾಥಮಿಕ ಮತ್ತು ಪ್ರೌಢಶಾಲಾ ಮಕ್ಕಳ ಚಿತ್ರಕಲಾ ಸ್ಪರ್ಧೆಯನ್ನು ಮಂಗಳೂರು ವಿವಿ ಕುಲಪತಿ ಪ್ರೊ.ಕೆ.ಭೈರಪ್ಪ ಉದ್ಘಾಟಿಸಿದರು.

**ಪುತ್ತೂರು:** ಗ್ರಾಮೀಣ ಪ್ರದೇಶದ ಅಭಿವೃದ್ಧಿಗೆ ಮಂಗಳೂರು ವಿಶ್ವವಿದ್ಯಾಲಯ ಬದ್ಧವಾಗಿದೆ. ಈ ನಿಟ್ಟಿನಲ್ಲಿ ವರ್ಷಕ್ಕೆ ನಾಲ್ಕು ಗ್ರಾಮಗಳನ್ನು ದತ್ತು ತೆಗೆದುಕೊಳ್ಳುವ ಯೋಜನೆಗೆ ಈ ವರ್ಷದಿಂದ ಚಾಲನೆ ನೀಡಲಾಗಿದೆ ಎಂದು ಮಂಗಳೂರು ವಿವಿ ಕುಲಪತಿ ಪ್ರೊ. ಕೆ.ಭೈರಪ್ಪ ಹೇಳಿದರು.

ಮಂಗಳೂರು ವಿವಿಯ ಎನ್.ಜಿ.ಪಾವಂಜೆ ಚಿತ್ರಕಲಾ ಪೀಠ ಆಶ್ರಯದಲ್ಲಿ ಹಮ್ಮಿಕೊಂಡ ಪುತ್ತೂರು ತಾಲೂಕು ಮಟ್ಟದ ಪ್ರಾಥಮಿಕ ಮತ್ತು ಪ್ರೌಢಶಾಲಾ ಮಕ್ಕಳ ಚಿತ್ರಕಲಾ ಸ್ಪರ್ಧೆಯನ್ನು ಸೋಮವಾರ ಬೆಳಗ್ಗೆ ಪುತ್ತೂರಿನ ಡಾ.ಕೆ.ಶಿವರಾಮ ಕಾರಂತರ ಬಾಲವನದಲ್ಲಿ ಉದ್ಘಾಟಿಸಿ ಮಾತನಾಡಿದರು.

ವಿಶ್ವವಿದ್ಯಾಲಯ ಕೇವಲ ಅತ್ಯುನ್ನತ ಮಟ್ಟದ ಶೈಕ್ಷಣಿಕ ವ್ಯವಸ್ಥೆಗೆ ಮೀಸಲಾಗಬಾರದು. ಹಳ್ಳಿಯ ಕಡೆಗೂ ತನ್ನ ಸೇವಾಹಸ್ತ ಚಾಚಬೇಕು. ದತ್ತು ಪಡೆದುಕೊಂಡ ಹಳ್ಳಿಗಳ ಸ್ಥಿತಿಗತಿ ಬಗ್ಗೆ ಅಧ್ಯಯನ ನಡೆಸಲಾಗುವುದು. ಇದರ ವರದಿಯನ್ನು ವಿಶ್ವವಿದ್ಯಾಲಯ ಹಾಗೂ ಸರ್ಕಾರಕ್ಕೆ ಸಲ್ಲಿಸಲಾಗುವುದು. ವಿಶ್ವವಿದ್ಯಾಲಯದ ಚಟುವಟಿಕೆ ಕ್ಯಾಂಪಸ್‌ನಿಂದ ಹೊರಗಿನ ಹಳ್ಳಿ ಕಡೆಗೂ ವಿಸ್ತರಿಸಬೇಕೆಂಬ ಧ್ಯೇಯದಿಂದ, ಪ್ರಾಥಮಿಕ ಹಾಗೂ ಪ್ರೌಢಶಾಲಾ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ ಏರ್ಪಡಿಸಲಾಗಿದೆ ಎಂದರು.

ಲಲಿತಕಲಾ ಪ್ರದರ್ಶನ ಉದ್ಘಾಟಿಸಿದ ಪುತ್ತೂರು ಉಪವಿಭಾಗದ ಸಹಾಯಕ ಆಯುಕ್ತ ಸತೀಶ್ ಕುಮಾರ್ ಡಿ.ಎಂ. ಮಾತನಾಡಿ, ಡಾ.ಶಿವರಾಮ ಕಾರಂತರ ಬಾಲವನದಲ್ಲಿ ಚಿತ್ರಕಲಾ ಸ್ಪರ್ಧೆ ಹಮ್ಮಿಕೊಂಡಿರುವುದು ಅರ್ಥಪೂರ್ಣ. ವಿಶ್ವವಿದ್ಯಾಲಯ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡು ಹಳ್ಳಿಯ ಮಕ್ಕಳಿಗೂ ವೇದಿಕೆ ನೀಡಿದೆ. ಇದಕ್ಕಾಗಿ ಮಂಗಳೂರು ವಿವಿಗೆ ಆಭಾರಿಯಾಗಿದ್ದೇವೆ ಎಂದರು.

ಹಿರಿಯ ಚಿತ್ರಕಲಾವಿದ ಪಿ.ಎಸ್.ಪುಣಿಂಚಿತ್ತಾಯ, ದಕ್ಷಿಣ ಕನ್ನಡ ಜಿಲ್ಲಾ ಚಿತ್ರಕಲಾ ಶಿಕ್ಷಕರ ಸಂಘದ ಅಧ್ಯಕ್ಷ ಮಹಾಬಲ ಕುಳ, ಕ್ಷೇತ್ರ ಶಿಕ್ಷಣಾಧಿಕಾರಿ ಜಿ.ಎಸ್. ಶಶಿಧರ್ ಉಪಸ್ಥಿತರಿದ್ದರು. ಮಂಗಳೂರು ವಿವಿ ಇಂಗ್ಲಿಷ್ ಪ್ರಾಧ್ಯಾಪಕ ಹಾಗೂ ಎನ್.ಜಿ.ಪಾವಂಜೆ ಚಿತ್ರಕಲಾ ಪೀಠದ ಸಂಯೋಜಕ ಪ್ರೊ.ರವಿಶಂಕರ್ ರಾವ್ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಮಂಗಳೂರು ವಿವಿ ಸಿಂಡಿಕೇಟ್ ಸದಸ್ಯ ಪ್ರಸನ್ನ ಕುಮಾರ್ ರೈ ಕಂಬ್ಳ ವಂದಿಸಿದರು. ಬಾಲವನ ಅಭಿವೃದ್ಧಿ ಸಮಿತಿ ಸದಸ್ಯ ಪ್ರೊ.ಬಿ.ಜೆ.ಸುವರ್ಣ ಕಾರ್ಯಕ್ರಮ ನಿರೂಪಿಸಿದರು.

ಮಂಗಳೂರು ವಿವಿ, ಎನ್.ಜಿ.ಪಾವಂಜೆ ಚಿತ್ರಕಲಾ ಪೀಠ ಮಂಗಳೂರು ವಿವಿ, ಪುತ್ತೂರು ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ, ಬಾಲವನ ಅಭಿವೃದ್ಧಿ ಸಮಿತಿ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಚಿತ್ರಕಲಾ ಶಿಕ್ಷಕರ ಸಂಘದ ಆಶ್ರಯದಲ್ಲಿ ಚಿತ್ರಕಲಾ ಸ್ಪರ್ಧೆ ಆಯೋಜಿಸಲಾಗಿತ್ತು.

### ಚಿತ್ರಕಲಾ ಸ್ಪರ್ಧೆ, ಪ್ರದರ್ಶನ

ವಿದ್ಯಾರ್ಥಿಗಳಿಗಾಗಿ ಚಿತ್ರಕಲಾ ಸ್ಪರ್ಧೆ, ಚಿತ್ರಕಲಾ ಶಿಕ್ಷಕರಿಗಾಗಿ ಪ್ರದರ್ಶನ ಇದು ಶಿಕ್ಷಕ ಹಾಗೂ ವಿದ್ಯಾರ್ಥಿಗಳಿಗೆ ಬಾಲವನ ಡಾ.ಶಿವರಾಮ ಕಾರಂತ ಬಾಲವನದಲ್ಲಿ ಸೋಮವಾರ ಹಮ್ಮಿಕೊಂಡ ಚಿತ್ರಕಲಾ ಸ್ಪರ್ಧೆ, ಪ್ರದರ್ಶನದ ವಿಶೇಷತೆ.

ಪುತ್ತೂರು ತಾಲೂಕನ್ನು ಕೇಂದ್ರವಾಗಿಟ್ಟು ಕೊಂಡು ಸ್ಪರ್ಧೆ ಆಯೋಜಿಸಿದ್ದು, ಸುಮಾರು 370 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಕಿರಿಯ ಪ್ರಾಥಮಿಕ, ಪ್ರಾಥಮಿಕ, ಪ್ರೌಢಶಾಲಾ ವಿಭಾಗದ ಮೂರು ಹಂತಕ್ಕೆ ಸ್ಪರ್ಧೆ ನಡೆಯಿತು. ದಕ್ಷಿಣ ಕನ್ನಡ ಮೂಲದ ಎನ್.ಜಿ.ಪಾವಂಜೆ ಅಂತಾರಾಷ್ಟ್ರೀಯ ಚಿತ್ರ ಕಲಾವಿದ. ಮೈಸೂರು ಸಂಸ್ಥಾನದಲ್ಲಿ ಅಂದಿನ ಅರಸರಿಂದಲೇ ಸನ್ಮಾನ ಪಡೆದುಕೊಂಡಿದ್ದರು. ಅವರ ಪುತ್ರಿ ತನ್ನ ತಂದೆಯ ಹೆಸರಿನಲ್ಲಿ ಮಂಗಳೂರು ವಿವಿಯಲ್ಲಿ ಪೀಠ ಸ್ಥಾಪನೆಗೆ ಮೂಲಧನ ಒದಗಿಸಿದ್ದರು. ಎನ್.ಜಿ. ಪಾವಂಜೆ ಚಿತ್ರಕಲಾ ಪೀಠದ ವತಿಯಿಂದ ಬಹುಮಾನ ವಿತರಿಸಲಾಯಿತು.

ವಿಜಯ ವಾ
10/11/2015